O.S.No.381.2020 P W - 1

ದಿನಾಂಕ 23.01.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ :

ಸರ್ವೆ ನಂ. 71 ರಲ್ಲಿ 2 ಎಕರೆ ಜಮೀನಿಗೆ ದಾವೆ ಹಾಕಿರುತ್ತೇವೆ. ಸದರಿ ದಾವೆಯನ್ನು ಅಶೋಕ್ ಕುಮಾರ್ ಮತ್ತು ಇತರರ ಮೇಲೆ ಹಾಕಿರುತ್ತೇನೆ. ಸದರಿ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ವಾಟರ್ ಟ್ಯಾಂಕ್ ಟೆಕ್ನಾಲಜಿ, ಪಶ್ಚಿಮಕ್ಕೆ ಕೋದಂಡರಾಜರವರ ಜಮೀನು, ಉತ್ತರಕ್ಕೆ ಕೋದಂಡರಾಜು ಮತ್ತು ಉಮಾಶಂಕರ ರವರ ಸ್ವತ್ತು, ದಕ್ಷಿಣಕ್ಕೆ ಗುಳಗೊಂಡನಹಳ್ಳಿ ರಸ್ತೆ. ನಾನು ನ್ಯಾಯಾಲಯಕ್ಕೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಗ್ರ್ಯಾಂಟ್ ಸರ್ಟಿಫಿಕೇಟ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಹಕ್ಕು ಪತ್ರವನ್ನು ಸರ್ಕಾರದವರು 1988 ರಲ್ಲಿ ನೀಡಿದ್ದರು. ತಹಶೀಲ್ದಾರ್ ರವರು ಸದರಿ ಹಕ್ಕು ಪತ್ರವನ್ನು ನೀಡಿದ್ದರು. 22 ಜನರಿಗೆ ಹಕ್ಕು ಪತ್ರಗಳನ್ನು ನೀಡಿದ್ದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದೃಢೀಕೃತ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೀಡಲು ತೊಂದರೆ ಇರಲಿಲ್ಲ. ಸದರಿ ದಾಖಲೆಗಳು ಮನೆಯಲ್ಲಿ ಇರಬಹುದು. ನನಗೆ ಯಾವುದೇ ಹಕ್ಕು ಪತ್ರ ನೀಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸರ್ವೆ ನಂಬರ್ 71 ರ ಸ್ವತ್ತು ಗೋಮಾಳ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ನೂರಾರು ಎಕರೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂಬರ್ 71 ರಲ್ಲಿನ ಜಮೀನುಗಳನ್ನು ಒಗ್ಗೂಡಿಸಲಾಗಿದೆ ಎಂದರೆ ಸರಿ. KEDB ರವರು ಸರ್ವೆ ನಂಬರ್ 71 ರಲ್ಲಿ ಯಾವುದೇ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸರಿ. ಸರ್ಕಾರದವರು ಜಮೀನು ನೀಡುವಾಗ ಸ್ಕೆಚ್ ಮಾಡಿ ನೀಡಿದ್ದರು ಅದನ್ನು ಹಾಜರುಪಡಿಸಬಹುದು. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೆ ಇಲಾಖೆಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೀಡಿಲ್ಲ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದುರಸ್ತಿ ಮತ್ತು ಹದ್ದು ಬಸ್ತಿಗೆ ನಾನು ಅರ್ಜಿ ನೀಡಿದ್ದೆ. ನಾನು ಆ ರೀತಿ ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು

Karnataka State Printers Association ನ ಪದಾಧಿಕಾರಿಗಳು ಎಂದರೆ ಸರಿ. ಸರ್ವೆ ನಂ. 70, 113, 136 , 137, 138 , 139, 629, 734, 736, 735, 802, 805, 816 ಸ್ವತ್ತುಗಳಲ್ಲಿ 2,30,630 ಚದರ ಮೀಟರ್ ರಷ್ಟು KEDB ರವರು ಕೈಗಾರಿಕಾ ಉದ್ದೇಶಕ್ಕಾಗಿ ಜಮೀನು ನೀಡಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. Printed Cluster ಸಂಸ್ಥೆಯವರು KSPA ಎಂಬ ಸಂಸ್ಥೆಗೆ ಸದರಿ ಜಾಗವನ್ನು Develop ಮಾಡಲು ಲೀಸ್ ಕಮ್ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಂಜೂರಾದ ಸ್ವತ್ತುಗಳನ್ನು ತಮ್ಮ ಸದಸ್ಯರಿಗೆ ಅವರು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಂಸ್ಥೆಯ ಪರವಾಗಿ ಪ್ರತಿವಾದಿಗಳು ಯಾವುದೇ ಜಮೀನನ್ನು ಇಟ್ಟುಕೊಂಡಿಲ್ಲ ಎಂದರೆ ಸರಿಯಿಲ್ಲ ಎಂದು ನುಡಿಯುತ್ತಾರೆ.

3. Innodi Water Techonology Pvt. Ltd. And NSM book industry ರವರ ವಿರುದ್ಧ ನಾನು ದಾವೆ ಹಾಕಿಲ್ಲ ಎಂದರೆ ಸರಿ. ಪ್ರತಿವಾದಿಯರಿಗೆ ಸಂಬಂಧಿಸಿದಂತಹ ಸ್ವತ್ತು ಪೂರ್ವದಲ್ಲಿ ಹೊರತು ಪಡಿಸಿ ಬೇರೆ ಚಕ್ಕುಬಂಧಿ ಯಲ್ಲಿ ಇಲ್ಲ ಎಂದರೆ ಸರಿ. nnodi Water Techonology Pvt. Ltd. And NSM book industry ಅದರ ಮಾಲೀಕರ ಬಗ್ಗೆ ನನಗೆ ಮಾಹಿತಿ ಇಲ್ಲ. ಅದಕ್ಕೆ ಸಂಬಂಧಿಸಿದವರು ನನಗೆ ಯಾವುದೇ ತೊಂದರೆ ಕೊಟ್ಟಿಲ್ಲ. ಪ್ರತಿವಾದಿಯರಿಗೆ ಸಂಬಂಧಿಸಿದ ಜಮೀನು ದಾವಾ ಸ್ವತ್ತಿನ ಚಕ್ಕುಬಂಧಿಯಲ್ಲಿ ಇಲ್ಲ ಎಂದರೆ ಸರಿ.

4. 02.11.2020 ರಲ್ಲಿ ಪ್ರತಿವಾದಿಯರು ಬಂದು ಜಗಳ ಮಾಡಿದರು. 1 ನೇ ಪ್ರತಿವಾದಿ ದಾವಾ ಸ್ವತ್ತಿನ ಬಳಿ ಬಂದಿದ್ದರು. Karnataka State Printers Association ನ ಪರವಾಗಿ ಅವರು ಬಂದಿದ್ದರು. ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ಹೇಳಿದರು. ದಾವಾ ಸ್ವತ್ತಿನಲ್ಲಿ ಯಾವುದೇ ಕಟ್ಟಡವಿಲ್ಲ ಎಂದರೆ ಸರಿ. Innodi Water Techonology Pvt. Ltd. And NSM book industry ರವರು ತಮ್ಮ ಸ್ವತ್ತಿನಲ್ಲಿ ಕಟ್ಟಡ ಕಟ್ಟಿಕೊಂಡು ಕಂಪೌಂಡ್ ಹಾಕಿದ್ದಾರೆ ಎಂದರೆ ಸರಿ. ಆ ಬಗ್ಗೆ ನನಗೆ ತಕರಾರು ಇಲ್ಲ. 06.11.2020 ರಂದು ಪುನಃ ದಾವಾ ಸ್ವತ್ತಿನ ಬಳಿ ಬಂದಿದ್ದರು. ಆ ಬಗ್ಗೆ ನಾನು ಪೋಲಿಸರಲ್ಲಿ ದೂರು ನೀಡಿದ್ದೆ. ಅದರ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ನಾನು ಆ ರೀತಿಯ ದೂರಿನ ಪ್ರತಿಯನ್ನು ನ್ಯಾಯಾಲಯದಲ್ಲಿ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದ ಪತ್ರದಲ್ಲಿ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ತೊಂದರೆ ಕೊಡಲು ಎರಡು ಬಾರಿ ಬಂದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತಿನ ಬಳಿ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಿಂದ ಅಥವಾ ಬೇರೆ ಇಲಾಖೆಯಿಂದ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಮ್ಮ ಜಮೀನಿನ ಬಳಿ ಬಂದಿಲ್ಲದೇ ಇದ್ದರೂ ಸಹ , ಸುಳ್ಳು ಚಕ್ಕುಬಂಧಿ ಹಾಕಿ ಪ್ರತಿವಾದಿಗಳಿಂದ ಹಣ ವಸೂಲು ಮಾಡಲು ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ವೆ ನಂ. 71 ರಲ್ಲಿ ನಿದಿರ್ಷ್ಟ ಜಮೀನಿನ ಸ್ವಾಧೀನದಲ್ಲಿ ಇಲ್ಲ, ನಾನು ದಾವಾ ಸ್ವತ್ತಿನಲ್ಲಿ ಯಾವುದೇ ಉಳುಮೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ